**ಅ.ದಾವಾ ನಂಬರ್ 90/2020** ಪಿ.ಡಬ್ಲ್ಯೂ - 1

**ದಿನಾಂಕಃ 10/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್.ಪಿ.ಎಸ್. ವಕೀಲರಿಂದಃ**

ನಮ್ಮ ಕುಟುಂಬದ ಮೂಲ ಪುರಷ ಚಿಕ್ಕೇಗೌಡರವರಿಗೆ ದಾವಾ ಆಸ್ತಿ ಬಂದಿರುವುದಕ್ಕೆ ಮ್ಯುಟೇಶನ್, ಆರ್.ಟಿ.ಸಿ. ಹಾಗೂ ಕಂದಾಯ ರಶೀದಿ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ಯಾವ ದಿಕ್ಕಿಗೆ ಸರ್ವೆ ನಂಬರ್ 61/1 ಬರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತವಾದ ಆಸ್ತಿಯಲ್ಲ ಎಂದರೆ ಸರಿಯಲ್ಲ. ನಾವು ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆ ಮತ್ತು ತಕರಾರನ್ನು ಓದಿ ತಿಳಿದುಕೊಂಡಿರುತ್ತೇನೆ. ಮೂಲತಃ ಸರ್ವೆ ನಂಬರ್ 61/2 ದಾಳಗೌಡನಹಳ್ಳಿ ಗ್ರಾಮದ ಬಸವೇಗೌಡನ ಮಗ ಬಸಪ್ಪರವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ, ಮೂಲತಃ ಸರ್ವೆ ನಂಬರ್ 61 ಇದ್ದು ನಂತರ ಸರ್ವೆ ನಂಬರ್ 61/1 ಮತ್ತು ಸರ್ವೆ ನಂಬರ್ 61/2 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 61 ಪೋಡು ಆದ ನಂತರ ಸರ್ವೆ ನಂಬರ್ 61/1 ರಲ್ಲಿ 4 ಎಕರೆ 26 ಗುಂಟೆ ಮತ್ತು ಸರ್ವೆ ನಂಬರ್ 61/2 ರಲ್ಲಿ 9 ಎಕರೆ 27 ಗುಂಟೆ ಆಗಿರುತ್ತದೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 61/2 ರ ಪೂರ್ವ ದಿಕ್ಕಿನ 4 ಎಕರೆ ಆಸ್ತಿಯನ್ನು ದಿನಾಂಕಃ 25.07.1961 ರಂದು ಬಸವೇಗೌಡನ ಮಗ ಬಸಪ್ಪನವರು ಜಾಕನಹಳ್ಳಿ ಗ್ರಾಮದ ಕೆಂಪೇಗೌಡನ ಮಗ ಜವರೇಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೀಗಾಗಿ 4 ಎಕರೆ ಜಮೀನು ಕೆಂಪೇಗೌಡರವರ ಸ್ವಾದೀನಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ಕೆಂಗೇಗೌಡರ ತಂದೆ ಹೆಸರು ಚಿಕ್ಕೇಗೌಡ ಎಂದರೆ ಸರಿ. ಚಿಕ್ಕೇಗೌಡರ ತಂದೆ ಹೆಸರು ಬೀದಿಮನೆ ಕೆಂಗೇಗೌಡ ಎಂದರೆ ಸರಿ. ಜಾಕನಹಳ್ಳಿಯ ಕಂಪೇಗೌಡನ ಮಗ ಜವರೇಗೌಡನು ಕ್ರಯಕ್ಕೆ ಪಡೆದ 4 ಎಕರೆ ಪೈಕಿ ಪೂರ್ವ ದಿಕ್ಕಿಗೆ 2 ಎಕರೆ ಉಳಿಸಿಕೊಂಡು, ಪಶ್ಚಿಮ ದಿಕ್ಕಿನ 2 ಎಕರೆ ಜಮೀನನ್ನು ದಿನಾಂಕಃ 16.12.1962 ರಲ್ಲಿ ಚಿಕ್ಕೇಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ, ದಿನಾಂಕಃ 16.12.1963 ರಲ್ಲಿ ನೊಂದಣಿ ಕ್ರಯಪತ್ರವಾಗುತ್ತದೆ ಎಂದರೆ ಸರಿಯಲ್ಲ. ಆಗಾಗಿ ನನಗೆ 2 ಎಕರೆ ಮಾತ್ರ ಬಂದಿರುತ್ತದೆ ಎಂದರೆ ಸರಿಯಲ್ಲ . ಕೆಂಪೇಗೌಡರ ಮಗ ಜವರೇಗೌಡ ಉಳಿಸಿಕೊಂಡಿರುವ 2 ಎಕರೆ ಜಮೀನನ್ನು ಪ್ರತಿವಾದಿ 1 ಮತ್ತು 2 ರವರ ತಂದೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಾತಾನಿಗೆ ಬಂದ ಮೂಲ ಕ್ರಯುಪತ್ರ ನನ್ನ ಬಳಿ ಇರುತ್ತದೆ. ದಿನಾಂಕಃ 08.03.1968 ರಲ್ಲಿ ಪ್ರತಿವಾದಿ1 ಮತ್ತು 2 ರವರ ತಂದೆಗೆ ಕೆಂಪೇಗೌಡರವರ ಮಗ ಜವರೇಗೌಡರವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ದಿನದಿಂದಲೂ ಇಲ್ಲಿಯತನಕ ಪ್ರತಿವಾದಿಗಳೇ ಸದರಿ ಆಸ್ತಿಯನ್ನು ಅನುಭೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇಲೆ ಎಂ.ಆರ್.ಸಂ. 15/1967-68 ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾತಾ ಮೃತಪಟ್ಟ ನಂತರ ನನ್ನ ತಂದೆ 3 ನೇ ವಾದಿ ಪೌತಿಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

ನನ್ನ ತಂದೆ ಪೌತಿ ಖಾತೆ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಪ್ರತಿವಾದಿಗಳ ಜಮೀನು ಸೇರಿಸಿಕೊಂಡು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುವುದರಿಂದ ಪ್ರತಿವಾದಿಗಳು ರೆವಿನ್ಯೂ ದಾಖಲೆಗಳನ್ನು ಪರಿಶೀಲಿಸಿದ ನಂತರ ನಾವು ಅಕ್ರಮವಾಗಿ ಖಾತೆಯನ್ನು ಬದಲಾವಣೆ ಮಾಡಿಕೊಂಡಿರುವುದು ಪ್ರತಿವಾದಿಗಳಿಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಖಾತೆ ಆದೇಶದ ವಿರುದ್ಧ ಪ್ರತಿವಾದಿಗಳು ಮಾನ್ಯ ಉಪವಿಭಾಗಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಎ.ಸಂ. 411/2019-20 ಎಂದು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ಪ್ರತಿವಾದಿಗಳು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿದ ನಂತರ ಪ್ರತಿವಾದಿಗಳ ವಿರುದ್ಧ ಪ್ರಸ್ತುತ ದಾವೆಯನ್ನು ತಂದಿರುತ್ತೇನೆ ಎಂದರೆ ಸರಿ. ಅದೇರೀತಿ ಪ್ರತಿವಾದಿಗಳು ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ.

ನಾನು ಹಳ್ಳಿ ಮೈಸೂರು ಪೋಲೀಸ್ ಠಾಣೆಯಲ್ಲಿ ಪ್ರತಿವಾದಿಗಳ ವಿರುದ್ಧ ಒಂದು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪೋಲೀಸ್ ನವರು ಸ್ಥಳಕ್ಕೆ ಬಂದು ಪ್ರತಿವಾದಿಗಳು ಸ್ವಾಧೀನ ಇದ್ದಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 61/1 ರಲ್ಲಿ 10 ಎಕರೆ 2 ಗುಂಟೆಗೆ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ನಾನು ಮೋಸದ ಪಹಣಿ ಪತ್ರಿಕೆಯ ಆಧಾರದ ಮೇಲೆ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ತಂದಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಿಜಾಂಶ ಗೊತ್ತುಗಾತ್ತದೆ ಎಂದು ನಮಗೆ ಆಗಿರುವ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1968 ರಿಂದಲೂ ಪ್ರತಿವಾದಿಗಳು ಸರ್ವೆ ನಂಬರ್ 61/2 ರ ಪೂರ್ವ ದಿಕ್ಕಿನ 2 ಎಕರೆಯಲ್ಲಿ ಸ್ವಾಧೀನ ಅನುಭೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದಾವೆ ತಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲಾತಿಗಳು ಮೋಸದಿಂದ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ